**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ. ರವರ ನ್ಯಾಯಾಲಯ,**

**ಪಿರಿಯಾಪಟ್ಟಣ.**

**ಸಿ.ಸಿ. 355/2019**

| | | |
|---|---|---|
| ಸಾಕ್ಷಿಯ ಹೆಸರುಃ | ಆನಂದ | ಪ್ರಾಸಾಃಃ 2 |
| ತಂದೆ ಹೆಸರುಃ | ಲೇಟ್ ಎಸ್ ಎಂ.ಶ್ರೀನಿವಾಸ | ಚಾಸಾಃಃ 2 |
| ವಯಸ್ಸುಃ | 41 ವರ್ಷ | ಪ್ರಮಾಣೀಕರಿಸಿದ<br>ದಿಃ 24/07/2023 |
| ಉದ್ಯೋಗಃ | ರೆವಿನ್ಯೂ ಇನ್ಸ್ ಪೆಕ್ಟರ್, ಹಾರನಹಳ್ಳಿ ಹೋಬಳಿ. | |
| ವಾಸಸ್ಥಳಃ | ಪಿರಿಯಾಪಟ್ಟಣ | |

**ಮುಖ್ಯ ವಿಚಾರಣೆಃ** ಮಾನ್ಯ ಸಸಅ **ರಿಂದಃ**

ನಾನು 2014 ರಲ್ಲಿ ಚನ್ನಕಲ್ ಕಾವಲ್ ಗ್ರಾಮದ ಗ್ರಾಮ ಲೆಕ್ಕಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೆ.

2. ಆರೋಪಿತ ಅಕ್ರಮವಾಗಿ ಕಲ್ಲು ಗಣಿಗಾರಿಕೆ ಮತ್ತು ಕ್ರಷರ್ ಘಟಕ ನಿರ್ಮಾಣ ಮಾಡಿದ್ದರು. ಈ ಸಂಬಂಧ ನಾನು ಮೇಲಾಧಿಕಾರಿಗಳಳಿಗೆ ಮಾಹಿತಿ ನೀಡಿರುತ್ತೇನೆ. ಅದರಂತೆ ದಿಃ 12/09/2014 ರಂದು ಪಿರಿಯಾಪಟ್ಟಣ ತಾಲ್ಲೂಕಿನ ತಹಶೀಲ್ದಾರ್–ಚಾಸಾ–5 ರವರು, ರೆವಿನ್ಯೂ ಇನ್ಸ್ ಪೆಕ್ಟರ್, ಹಾರನಹಳ್ಳಿ ಹೋಬಳಿ–ಚಾಸಾ–3 ರವರು ಮತ್ತು ಚಾಸಾ–4– ತಾಲ್ಲೂಕು ಸರ್ವೇಯರ್ ಶ್ರೀ ಮುನಿಯಪ್ಪ ರವರು, ಟಾಸ್ಕ್ ಪೋರ್ಸ್ ಸಮಿತಿಯ ಸದಸ್ಯರಾದ ಪ್ರಾಸಾ–1–ಲಿಂಗರಾಜುರವರು ಹಾಗೂ ಚಾಸಾ–6 ಮತ್ತು 7 ಹಾಗೂ ಚಾಸಾ–9 ರವರು ಎಲ್ಲರೂ ಒಟ್ಟಿಗೆ ಸೇರಿ ಚನ್ನಕಲ್ಲುಕಾವಲು, ಗ್ರಾಮದ ಸರ್ವೆ ನಂಬರ್ 30 ರಲ್ಲಿ ಅಕ್ರಮವಾಗಿ ಕಲ್ಲು ಗಣಿಗಾರಿಕೆ ಮತ್ತು ಕ್ರಷರ್ ನಡೆಯುತ್ತಿರುವ ಬಗ್ಗೆ ದಾಳಿ ಮಾಡಿದ ಸಮಯದಲ್ಲಿ ಕಂಡು ಬಂದಿರುತ್ತದೆ. ಈ ಸಂಬಂಧ ವಿ.ಟಿ.ದಿನೇಶ್ ಕುಮಾರ್ ರವರು ಅಕ್ರಮವಾಗಿ ಕಲ್ಲು ಪುಡಿಯನ್ನು ಕುಶಾಲನಗರ ಮತ್ತು ಹಸುವಿನ

ಕಾವಲು ಗ್ರಾಮದಲ್ಲಿ ಶೇಖರಿಸಿಟ್ಟಿರುವುದು ಕಂಡು ಬಂದಿರುತ್ತದೆ. ಈ ಸಂಬಂಧ ಹಿರಿಯ ಭೂವಿಜ್ಞಾನಿಗಳಾದ–ಫ್ರಾಸಾ–1 ರವರು ಬೆಟ್ಟದಪುರ ಪೊಲೀಸ್ ಠಾಣೆಗೆ ಆರೋಪಿತರ ವಿರುದ್ಧ ಪ್ರಕರಣ ದಾಖಲಿಸಿರುತ್ತಾರೆ. ಆರೋಪಿತರು ಅಕ್ರಮವಾಗಿ ಕಲ್ಲು ಪುಡಿಯನ್ನು ಸಂಗ್ರಹಿಸಿ ಇಟ್ಟಿದ್ದು, ಇದರಿಂದ ಸರ್ಕಾರಕ್ಕೆ ತುಂಬಲಾರದ ನಷ್ಟವಾಗಿರುತ್ತದೆ. ಹಾಗೆ ಶೇಖರಿಸಿಟ್ಟಿದ್ದ ಕಲ್ಲು ಪುಡಿಯನ್ನು ನೋಡಿರುತ್ತೇನೆ. ಈಗ ನೋಡಿದರೆ ಗುರುತಿಸುತ್ತೇನೆ. ನಾವು ಹಸುವಿನ ಕಾವಲ್ ಗ್ರಾಮದ ಸರ್ವೆ ನಂಬರ್ 27 ಕ್ಕೆ ಹೋದಾಗ ಹೋದಾಗ ಆರೋಪಿತ ಸ್ಥಳದಲ್ಲಿ ಇರಲಿಲ್ಲ. ನಾವು ಹೋಗಿ ನೋಡಿದಾಗ ಕಲ್ಲು ಪುಡಿಯು 600 ಚದರ ಮೀಟರ್ ಅಗಲ ಮತ್ತು 3 ಮೀಟರ್ ಎತ್ತರ ಇತ್ತು. ಅದನ್ನು ನಾವು ಅಮಾನತ್ತು ಪಡಿಸಿಕೊಂಡೆವು. ಫ್ರಾಸಾ–1 ರವರು ಅಮಾನತ್ತು ಪಡಿಸಿಕೊಂಡ ಬಗ್ಗೆ ಮಧ್ಯಾಹ್ನ 12.00 ಗಂಟೆಯಿಂದ 1.30 ರವರೆಗೆ ಮಹಜರ್ ಕ್ರಮ ಜರುಗಿಸಿದರು. ಸಾಕ್ಷಿಯು ಪೋಟೋಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಈಗಾಗಲೇ ನಿಪಿ.5 ರಿಂದ 8 ಎಂದು ಗುರುತಿಸಲಾಗಿದೆ. ಅಮಾನತ್ತು ಮಹಜರ್ ಮಾಡಿದ ನಂತರ ಆರೋಪಿತನ ವಿರುದ್ದ ಫ್ರಾಸಾ–1 ರವರು ಬೆಟ್ಟದಪುರ ಪೊಲೀಸ್ ಠಾಣೆಗೆ ದೂರನ್ನು ಸಲ್ಲಿಸಿದರು. ಅಕ್ರಮ ಗಣಿಗಾರಿಕೆ ಮಾಡುತ್ತಿದ್ದ ಆರೋಪಿತನನ್ನು ನೋಡಿದರೆ ಗುರುತಿಸುತ್ತೇನೆ. ಅತ ಇಂದು ನ್ಯಾಯಾಲಯದಲ್ಲಿ ಹಾಜರಿದ್ದಾರೆ.

(ಈ ಹಂತದಲ್ಲಿ ಮಾನ್ಯ ಸಸಅ ರವರು ಮುಂದುವರೆದ ಮುಖ್ಯ ವಿಚಾರಣೆಗೆ ಸಮಯ ಕೋರಿದ್ದು, ಸಮಯ ನೀಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದಂತೆ ನನ್ನ ಉಕ್ತಲೇಖದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಒ

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ. ಪಿರಿಯಾಪಟ್ಟಣ.